## JSS COLLEGE OF ARTS, COMMERCE & SCIENCE
(Autonomous)
OOTY ROAD, MYSORE – 570 025
(Autonomous under University of Mysore:: Re-accredited by NAAC with 'A' grade)

☎: 0821-2548236, 2548380 Fax: 0821-2548238 e-mail: jssautonomous@gmail.com


ದಿನಾಂಕ 01.09.2017

**ಪ್ರಕಟಣೆಯ ಕೃಪೆಗಾಗಿ**

**ಸ್ವಚ್ಛತಾ ಅಭಿಯಾನದ ಯಶಸ್ಸು ಯುವಜನತೆಯ ಗುಣಾತ್ಮಕ ಪಾಲ್ಗೊಳ್ಳುವಿಕೆಯಿಂದ ಸಾಧ್ಯ**

– ಡಾ. ಸಿ.ಜಿ. ಬೆಟಸೂರಮಠ

'ಯುವಜನತೆಯ ಗುಣಾತ್ಮಕ ಪಾಲ್ಗೊಳ್ಳುವಿಕೆ ಇದ್ದಾಗ ಮಾತ್ರ ಮಹತ್ತರವಾದುದನ್ನು ಸಾಧಿಸಲು ಸಾಧ್ಯ. ಪರಿಸರವನ್ನು ಸ್ವಚ್ಛವಾಗಿಡುವಲ್ಲಿಯೂ ಅವರ ಕೊಡುಗೆಯೇ ಹೆಚ್ಚಿದೆ. ಈ ದಿಸೆಯಲ್ಲಿ ಯುವವಿದ್ಯಾರ್ಥಿಗಳಾದ ನೀವುಗಳು ಸ್ವಚ್ಛತಾ ಅಭಿಯಾನದಲ್ಲಿ ಕೈಜೋಡಿಸಬೇಕು.' ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಯವರಾದ ಡಾ. ಸಿ.ಜಿ. ಬೆಟಸೂರುಮಠರವರು ಹೇಳಿದರು.

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ನಡೆದ 'ಸ್ವಚ್ಛತಾ ಪಕ್ವಾಡ' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. 'ಮಹಾವಿದ್ಯಾಪೀಠವು ಸ್ವಚ್ಛ ಆವರಣ, ಹಸಿರು ಆವರಣ ಎಂಬ ಧ್ಯೇಯದೊಂದಿಗೆ ವಿದ್ಯಾಪೀಠದ ವ್ಯಾಪ್ತಿಯಲ್ಲಿರುವ ಕಾಲೇಜುಗಳಲ್ಲಿ ಸ್ವಚ್ಛತಾ ಅಭಿಯಾನವನ್ನು ಹಮ್ಮಿಕೊಂಡಿದೆ. ಅದರಲ್ಲಿ ಯುವ ಪೀಳಿಗೆಯಾದ ವಿದ್ಯಾರ್ಥಿಗಳ ಸಕ್ರಿಯ ಪಾಲ್ಗೊಳ್ಳುವಿಕೆ ಅತ್ಯಂತ ಅಗತ್ಯವಾಗಿದ್ದು ಒಗ್ಗಟ್ಟಿನಿಂದ ಶ್ರಮಿಸಿದಾಗ ಅದು ಯಶಸ್ವಿಯಾಗುತ್ತದೆ. ಸಾರ್ವಜನಿಕರಲ್ಲಿ ಅರಿವು ಮೂಡಿಸಿದಾಗ ಮಾತ್ರ ಸರ್ಕಾರಿ ಯೋಜನೆಗಳ ಉದ್ದೇಶ ಈಡೇರಲು ಸಾಧ್ಯ. ಈ ನಿಟ್ಟಿನಲ್ಲಿಯೂ ಸಹ ಸಂಸ್ಥೆಯ ವಿದ್ಯಾರ್ಥಿಗಳು ತಮ್ಮ ಕೊಡುಗೆಯನ್ನು ನೀಡಬೇಕು' ಎಂದು ಕರೆ ನೀಡಿದರು.

ಕಾಲೇಜು ಸಮುಚ್ಛಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡುತ್ತಾ "ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ನಿರ್ದೇಶನದಂತೆ ಸ್ವಚ್ಛತಾ ಪಕ್ವಾಡ ಕಾರ್ಯಕ್ರಮದಡಿಯಲ್ಲಿ ಕಾಲೇಜು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಸೆಪ್ಟೆಂಬರ್ ಒಂದರಿಂದ ಹದಿನೈದರವರೆಗೆ ಈ ಕಾರ್ಯಕ್ರಮಗಳು ನೆರವೇರಲಿದ್ದು ವಿದ್ಯಾರ್ಥಿಗಳು ಸಕ್ರಿಯವಾಗಿ ಪಾಲ್ಗೊಳ್ಳಬೇಕು" ಎಂದು ತಿಳಿಸಿದರು. ಅಲ್ಲದೆ ಯೋಜಿತ ಕಾರ್ಯಕ್ರಮಗಳ ವಿವರಗಳನ್ನು ನೀಡಿದರು.

ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾದ ಶ್ರೀ ಎಂ.ಎಸ್.ಎಸ್. ಕುಮಾರ್‌ರವರು ನದಿನೀರಿನ ಸಂರಕ್ಷಣೆ ಕುರಿತು ಮಾತನಾಡಿದರು. ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಪಿ. ವೆಂಕಟರಾಮಯ್ಯನವರು ಸ್ವಚ್ಛತಾ ಅಭಿಯಾನದ ಪ್ರತಿಜ್ಞಾವಿಧಿಯನ್ನು ಬೋಧಿಸಿದರು.

ಪ್ರಾಂಶುಪಾಲರಾದ ಪ್ರೊ. ಎಂ. ಮಹಾದೇವಪ್ಪನವರು ಸ್ವಾಗತಿಸಿದರು. ಕು. ತೇಜು ಪ್ರಾರ್ಥಿಸಿದರು. ಪ್ರೊ. ಎಸ್.ಡಿ ಸದಾಶಿವಮೂರ್ತಿಯವರು ನಿರೂಪಿಸಿದರು. ಪ್ರೊ. ಎಂ.ಪಿ. ಸೋಮಶೇಖರರವರು ವಂದಿಸಿದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಬಿ ನಿರಂಜನಮೂರ್ತಿ, ಕಾಲೇಜು ಶಿಕ್ಷಣ ಇಲಾಖೆಯ ಮೈಸೂರು ವಿಭಾಗದ ಉಪ ನಿರ್ದೇಶಕರಾದ ಶ್ರೀ ಎಂ.ಕೆ. ಉಮಾನಾಥ್‌ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಮಾರಂಭಕ್ಕೆ ಮೊದಲು ಬೆಳಗ್ಗೆ 9.30 ರಿಂದ 11.00 ಗಂಟೆವರೆಗೆ ಕಾಲೇಜಿನ ಎನ್‌ಎಸ್‌ಎಸ್ ಸ್ವಯಂ ಸೇವಕರು 'ನದಿಗಳನ್ನು ರಕ್ಷಿಸಿ' ರ್‍ಯಾಲಿಯನ್ನು ನಡೆಸಿ ಇಶಾ ಫೌಂಡೇಷನ್ ನಡೆಸುತ್ತಿರುವ ಅಭಿಯಾನಕ್ಕೆ ಸಾರ್ವಜನಿಕರ ಸಹಕಾರವನ್ನು ಕೋರಲಾಯಿತು. ಫಲವಾಗಿ ಸುಮಾರು 600 ಮಂದಿ ತಮ್ಮ ದೂರವಾಣಿಯ ಮೂಲಕ ಮತದಾನ ಮಾಡಿದರು.

ಗೆ,

ಸಂಪಾದಕರು

____________________

____________________

ಪ್ರಾಂಶುಪಾಲರು
ಪ್ರಾಂಶುಪಾಲರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
ಊಟಿ ರಸ್ತೆ, ಮೈಸೂರು-25